ಸಮುದ್ರ ಮಥನ




### ಚಿಂತನಾರ್ಹ ಬರಹ

'ದಾಂಪತ್ಯದ ಬೇಲಿ ಜಿಗಿದರೆ..' ನಡಹಳ್ಳಿ ವಸಂತ್ ಅವರ ಮುಖಪುಟ ಲೇಖನ (ಸುಧಾ, ಆಗಸ್ಟ್ 31) ದಲ್ಲಿ ಸಂಸಾರದ ಸರಿಗಮಪವನ್ನು ಸವಿಸ್ತಾರವಾಗಿ ಚರ್ಚಿಸಿದ್ದಾರೆ. ಇಂದು ದಾಂಪತ್ಯದಲ್ಲಿ ಬೇಲಿಯೇ ಇಲ್ಲದಂತಾಗಿ ಅಫೇರ್ ಎನ್ನುವುದು ಫ್ಯಾಷನ್ ಆಗಿದೆ. ವಿಚಾರಪೂರ್ಣ ಹಾಗೂ ಚಿಂತನಾರ್ಹ ಬರಹವಿದು.

—ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ, ಕೊಹಿಮ ಬಸರಕೋಡು, ಸಿ.ಪಿ.ಕೆ. ಮೈಸೂರು

### ಕಾನೂನಿನ ವಿಶ್ಲೇಷಣೆ

ಮುಖಪುಟ ಲೇಖನ ಪ್ರಸ್ತುತ ಸಮಾಜದಲ್ಲಿ ಕಾಣುವ ಸಕಲ ಆಗು ಹೋಗುಗಳ ಸಂಕಲನವೆಂದರೆ ತಪ್ಪಾಗಲಿಕ್ಕಿಲ್ಲ. ಲಿವಿಂಗ್ ಟುಗೆದರ್ ಎಂಬ ಪಾಶ್ಚಿಮಾತ್ಯ ಸಂಪ್ರದಾಯವನ್ನು ರೂಢಿಸಿಕೊಂಡಿರುವುದನ್ನು ಸಮರ್ಥಿಸಿಕೊಳ್ಳುವ ದಿನಗಳಲ್ಲಿ ವಿವಾಹೇತರ ಸಂಬಂಧಗಳನ್ನು ಪುಷ್ಟೀಕರಿಸುವ ದೈನಂದಿನ ರಿವಾಜಿಗೆ ಕಾನೂನಾತ್ಮಕ ವಿಶ್ಲೇಷಣೆಯಿಂದ ಲೇಖನಕ್ಕೆ ಇನ್ನೂ ಹೆಚ್ಚಿನ ಪ್ರಾಮುಖ್ಯತೆ ದೊರಕಿಸಿಕೊಡಬಹುದಾಗಿತ್ತೇನೋ? ಒಟ್ಟಿನಲ್ಲಿ ಲೇಖನ ಆಧುನಿಕ ದೈನಂದಿನ ಚಟುವಟಿಕೆಗೆ ಹಿಡಿದ ಕನ್ನಡಿಯಾಗಿದೆ.

— ನಳಿನಿ ಆರ್. ಮಾಗಲ್ ಸಕಲೇಶಪುರ

### ಸಮಯೋಚಿತ

ವಿಚಾರಲಹರಿಯಲ್ಲಿ 'ಲಿಂಗಾಯತ ಧರ್ಮ' (ಮೂಚಿ) ಬರಹ ಸಮಯೋಚಿತ. ಲಿಂಗಾಯತ ಧರ್ಮದ ಆಳಗಲವನ್ನು ಬೇರು ಮಟ್ಟದವರೆಗೂ ಚಿಂತನೆಗೆ ಹಚ್ಚಿ ವೀರಶೈವ ಹಾಗೂ ಲಿಂಗಾಯತ ಒಂದೇ ಎನ್ನುವುದನ್ನು ಅದ್ಭುತವಾಗಿ ಚಿತ್ರಿಸಿದ್ದಾರೆ.

—ಸುಂದರ್ ಬೆಂಗಳೂರು, ನರೇಂದ್ರ ಸಿರಕಜೆ ಮೈಸೂರು, ಬಂಟ್ವಾಳ ಸೂರ್ಯನಾರಾಯಣರಾವ್ ಮಂಡ್ಯ, ಬಸವರಾಜ ಹೂಗಾರ ಹಿರೇಸಿಂಗನಗುತ್ತಿ, ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು

### ವಾಸ್ತವ ಸಂಗತಿ

'ನಮ್ಮೊಡನೆ'ಯಲ್ಲಿ 'ಭಾಷೆಗಳನ್ನು ಉಳಿಸಿ' (ಬಿ.ಎಂ. ಹನೀಫ್) ಬರಹ ಚೆನ್ನಾಗಿದೆ. ವಾಸ್ತವ ಸಂಗತಿಗಳನ್ನು ಚರ್ಚಿಸಿ ಭಾಷೆಯ ಅಳಿವಿನ ಮೂಲಕ ಸಂಸ್ಕೃತಿಯ ಅಳಿವೂ ಉಂಟಾಗುವ ಅಪಾಯವನ್ನು ವಿವರಿಸಲಾಗಿದೆ. ಭಾಷೆ ಮತ್ತು ಸಂಸ್ಕೃತಿ ಉಳಿಸಿ ಬೆಳೆಸಬೇಕಾದ ಅಗತ್ಯವನ್ನು ಲೇಖಕರು ಸಾರಿ ಹೇಳಿದ್ದಾರೆ.

—ಹುರುಕಡ್ಲಿ ಶಿವಕುಮಾರ ಬಾಚಿಗೊಂಡನಹಳ್ಳಿ, ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ, ಮಹಾವೀರ ಕಾಸರ ಶಿವಮೊಗ್ಗ

### ಗಮನ ಸೆಳೆಯುವಂತಿದೆ

'ಲುಂಬಿನಿಯಲ್ಲಿ ಒಂದು ದಿನ' (ಚೈತ್ರಾ ಅರ್ಜುನಪುರಿ) ಪ್ರವಾಸ ಲೇಖನ ಗಮನ ಸೆಳೆಯುವಂತಿದೆ. ಲೇಖಕರ ನೇಪಾಳ ಭೇಟಿ ನಿಜಕ್ಕೂ ಒಂದು ಸಾಹಸವೇ ಸರಿ.

—ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ, ಎಸ್.ಚನ್ನಪ್ಪ ಮೈಸೂರು

### ಉತ್ತಮ ಮಾಹಿತಿ

'ಉಳಿತಾಯಕ್ಕೆ ನೂರು ದಾರಿ' (ಜೆ.ಸಿ. ಜಾಧವ) ಲೇಖನ ವಿಚಾರಪೂರ್ಣ. ಯಾವ ಸಂದರ್ಭದಲ್ಲಿ ಎಷ್ಟು, ಹೇಗೆ ಹಣ ಬಳಸಬೇಕು, ಹಣದ ಸದುಪಯೋಗವಾಗುವ ಬಗ್ಗೆ ಲೇಖನದಲ್ಲಿ ಉತ್ತಮ ಮಾಹಿತಿ ಇದೆ.

—ರವೀಂದ್ರನಾಥ ಶಿ. ಯಡಹಳ್ಳಿ

### ಉಳಿತಾಯಕ್ಕೆ ದಾರಿ

ಕೆಲವೊಮ್ಮೆ ಉಳಿತಾಯವೇ ನಮ್ಮನ್ನು ಕಾಪಾಡುತ್ತದೆ. ಆರ್‌ಡಿ, ಜೀವವಿಮೆ, ಬ್ಯಾಂಕ್‌ಠೇವಣಿ, ಚಿನ್ನದ ಬಾಂಡ್, ಪೆನ್ಶನ್ ಯೋಜನೆಗಳು ಒಳ್ಳೆಯದೇ. ಇವೆಲ್ಲದರ ಜತೆಗೆ ಲೇಖಕರು ಮರೆತ ಒಂದು ಮಹತ್ವದ ಅಂಶ ಎಂದರೆ 'ಭೂಮಿ ಮೇಲೆ ಹಣ ತೊಡಗಿಸಿಕೊಳ್ಳುವುದು'. ನಿವೇಶನ ಖರೀದಿ ಅಥವಾ ಮನೆ ಖರೀದಿ ಕೂಡ ಹಣ ಉಳಿತಾಯಕ್ಕೆ ಒಳ್ಳೆಯ ಉಪಾಯ.

—ನಾರಾಯಣ ಯಾಜಿ ಶಿರಾಲಿ

### ಸಬಲೀಕರಣ

'ಸುಖೀದಾಂಪತ್ಯ' ಅಂಕಣದಲ್ಲಿ (ಡಾ.ವಿನೋದ ಛೆಬ್ಬಿ) ಗಂಡ ಹೆಂಡತಿಗೆ ನೀಡಿರುವ ಸಲಹೆ ಸ್ವಾಗತಾರ್ಹ. ಗಂಡೇ ಇರಲಿ, ಹೆಣ್ಣೇ ಇರಲಿ ಕಣ್ಣಿನ ದೃಷ್ಟಿ ಸಂಸಾರ ಬಿಟ್ಟು ಇರಬಾರದು. ಹೆಂಡತಿ ಸಬಲೀಕರಣಗೊಂಡಲ್ಲಿ ಕೆಟ್ಟ ಗಂಡನ ಮುಖವಾಡ ಕಳಚಿ ಬೀಳುತ್ತದೆ. ಇಬ್ಬರಿಗೂ ಅರಿವು ಅಗತ್ಯ.

—ರಾಜಶೇಖರ ಹಾದಿಮನಿ ಧಾರವಾಡ

### ಹೆಮ್ಮೆ ಎನಿಸಿತು

'ಕೊಬ್ಬರಿ ದುನಿಯಾ' (ದಿಲಾವರ್ ರಾಮದುರ್ಗ) ಲೇಖನ ಉಪಯುಕ್ತ. ಕೊಬ್ಬರಿ ದುನಿಯಾ ಬರುತ್ತಿದ್ದಂತೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಿಂಚುತ್ತಿರುವ ನಮ್ಮ ಕರ್ನಾಟಕ ಕೊಬ್ಬರಿಯ ಬಗ್ಗೆ ಹೆಮ್ಮೆ ಎನಿಸಿತು.

—ಮುಕುಂದ ಹೆರಕಲ್ಲ ಕಲಬುರಗಿ

### 'ಹಾರರ್ ಯುಗ'

ವ್ಯಕ್ತಿತ್ವ ವಿಕಸನ 'ಹಾರರ್ ಯುಗ' (ಎಂ.ವೇದಾವತಿ) ಲೇಖನ ಮಾಹಿತಿಯುಕ್ತವಾಗಿದೆ. ಹಿರಿಯರ ಕಥನಶೈಲಿಯ ಮೇಲೆ ಬೆಳಕು ಚೆಲ್ಲುವಲ್ಲಿ ಯಶಸ್ವಿಯಾಗಿದೆ.

— ಮೈ. ಸತೀಶ ಕುಮಾರ ಬಂಗಾರಪೇಟೆ

## ಕಥಾ ಸ್ಪರ್ಧೆಗೆ ಆಹ್ವಾನ

'ಕೃಷಿ ಸಮಯ' ತನ್ನ 6ನೇ ವರ್ಷದ ವಿಶೇಷ ಸಂಚಿಕೆಯನ್ನು ನವೆಂಬರ್‌ನಲ್ಲಿ ರೂಪಿಸುತ್ತಿದೆ. ಈ ಸಂಬಂಧ 'ಕಥಾ ಸ್ಪರ್ಧೆ'ಯನ್ನು ಏರ್ಪಡಿಸಿದೆ. ಕಥೆಯ ವಸ್ತು ಕೃಷಿ ಸಂಬಂಧಿತವಾಗಿರಬೇಕು. ಪದ ಮಿತಿ 1500 ಶಬ್ದಗಳ ಒಳಗಿರಬೇಕು. ಬೇರೆ ಎಲ್ಲಿಯೂ ಪ್ರಕಟವಾಗದ ಹೊಸ ಕಥೆಯನ್ನು ಸ್ಪರ್ಧೆಗೆ ಕಳುಹಿಸಬಹುದು. ಅಕ್ಟೋಬರ್ 5 ಕೊನೆಯ ದಿನ.

ವಿಳಾಸ 'ಕೃಷಿ ಸಮಯ' ನಂ.41, ಎರಡನೇ ಮಹಡಿ, 4ನೇ ಕ್ರಾಸ್ ಗಣೇಶ ಬ್ಲಾಕ್ ನಂದಿನಿ ಲೇ ಔಟ್ ಬೆಂಗಳೂರು 96 ವಿವರಕ್ಕೆ ಇ ಮೇಲ್: nagesh.kalenahalli@gmail.com


